**ದಿನಾಂಕಃ 25.10.2025 ರಂದು ಸಾಕ್ಷಿದಾರರು ಹಾಜರಿದ್ದು, ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ–ಸವಾಲುಃ ಆರೋಪಿ ಪರ ಶ್ರೀ ಡಿ.ಜಿ. ವಕೀಲರಿಂದಃ–**

1. ನಾನು 7 ನೇ ತರಗತಿ ಓದಿದ್ದೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಇಂಗ್ಲೀಷ್ ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ಚಿಲ್ಲರೆ ಅಂಗಡಿ ವ್ಯಾಪಾರಿಯಾಗಿರುತ್ತೇನೆ. ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ಹೆಂಡತಿ ಇದ್ದೇವೆ. ನನಗೆ ಒಬ್ಬಳೇ ಮಗಳು ಇರುತ್ತಾರೆ. ಆರೋಪಿ ಮಂಜುನಾಥ್ ಸುಮಾರು 3 ವರ್ಷಗಳಿಂದ ಪರಿಚಯ ಇರುತ್ತಾರೆ. ಆರೋಪಿ ಗುತ್ತಿಗೆ ಕೆಲಸ ಮಾಡುತ್ತಾರೆ. ಆರೋಪಿಯ ತಂದೆಯ ಹೆಸರು ಹನುಮಂತಪ್ಪ. ಅವರ ತಾಯಿಯ ಹೆಸರು ನನಗೆ ಗೊತ್ತಿಲ್ಲ. ಆರೋಪಿ ಹರಿಶ್ಚಂದ್ರಘಾಟ್, ಹಿರಿಯೂರು ನಗರದಲ್ಲಿ ವಾಸ ಮಾಡುತ್ತಾರೆ.

2. ನಾನು ನಗದು ರೂಪದಲ್ಲಿ ಆರೋಪಿಗೆ ರೂ.4,50,000/– ಹಣ ನೀಡಿರುತ್ತೇನೆ. ಜನವರಿ 5 ನೇ ತಾರೀಖು 2025 ರಂದು ಆರೋಪಿ ನನ್ನ ಬಳಿ ಹಣ ಕೇಳಿರುತ್ತಾರೆ, ನಾನು ದಿನಾಂಕಃ10.01.2025 ರಂದು ಆರೋಪಿಗೆ ಹಣ ನೀಡಿರುತ್ತೇನೆ. ಹಣ ನೀಡುವಾಗ ನಾನು, ನನ್ನ ಹೆಂಡತಿ ಮತ್ತು ಆರೋಪಿ ಇದ್ದೆವು. ನಮ್ಮ ಮನೆಯ ಒಳಗೆ ಹಣ ನೀಡಿರುತ್ತೇವೆ. ನಿಪಿ–1 ನ್ನು ಆರೋಪಿಯೇ ಅವರ ಮನೆಯಲ್ಲಿ ಬರೆದುಕೊಂಡು ತಂದಿದ್ದರು. ನನ್ನ ಪ್ರತಿ ತಿಂಗಳ ಆದಾಯ ಸುಮಾರು ರೂ.5,000/– ಇದೆ. ನನಗೆ ವಯಸ್ಸಾಗಿರುವುದರಿಂದ ನಾನು ಯಾವುದೇ ಕೆಲಸ ಮಾಡುವುದಿಲ್ಲ ಎಂದರೆ ಸರಿ. ನನ್ನನ್ನು ಹೊರತುಪಡಿಸಿ ನಮ್ಮ ಮನೆಯಲ್ಲಿ ಬೇರೆ ಯಾರೂ ದುಡಿಯುವುದಿಲ್ಲ ಎಂದರೆ ಸರಿ.

3. ದಿನಾಂಕಃ12.02.2025 ರಂದು ಆರೋಪಿಗೆ ನೋಟೀಸ್ ಕಳುಹಿಸಿರುತ್ತೇನೆ. ರೂ.500/– ಮುಖಬೆಲೆಯ 9 ಕಟ್ಟುಗಳನ್ನು ಆರೋಪಿಗೆ ನೀಡಿರುತ್ತೇನೆ. ಆರೋಪಿಯ ಕೈಕೆಳಗೆ 4–5 ಜನ ಹುಡುಗರು ಕೆಲಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಗುತ್ತಿಗೆ ಕೆಲಸ ಮಾಡುವುದಕ್ಕೆ ಹಣ ಬೇಕಾಗಿದೆ, ಒಂದು ತಿಂಗಳಲ್ಲಿ ವಾಪಾಸ್ ಕೊಡುತ್ತೇನೆ ಎಂದು ಆರೋಪಿ ನನ್ನ ಬಳಿ ಹಣ ಕೇಳಿರುತ್ತಾರೆ.

**ಆರೋಪಿ ಪರ ವಕೀಲುರು ಮುಂದುವರಿದ ಪಾಟೀ–ಸವಾಲಿಗೆ ಕಾಲಾವಕಾಶ ಕೋರಿದ್ದು ರೂ.300/– ಖರ್ಚುಗಳೊಂದಿಗೆ ಪಾಟೀ–ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನ ಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.